ಆಗ ಹೋಗಿದ್ದ ಶಂಭು. ಆಗಲೇ ಪೂರ್ತಿ ಸೋತು ಹೋಗಿದ್ದ. ಎಲುಬು ಚರ್ಮ ಮಾತ್ರ ಇತ್ತು. ಆದರೂ ಮಾತಿನ ಜಾಪು ಕಡಿಮೆಯಾಗಿರಲಿಲ್ಲ. ಅಣ್ಣ ಹೊರಗೆ ಇದ್ದಾಗ ವಾರ್ಡಿನಲ್ಲಿ ಹೇಳಿದ್ದ: 'ಮನೇಲಿ ಎಂಥದೂ ತಿಂಬ್ಲೆ ಮೆಚ್ಚತಿಲ್ಲೆ. ಇಲ್ಲಿ ಹೋಟೆಲಿನಿಂದ ತರಿಸಲು ಆಗ್ತು. ನೋಡ್ಕಂಬಲೆ ನರ್ಸ ಎಲ್ಲಾ ಇರ್ತೊ...' ಊಟದ ರುಚಿ ಇತ್ಯಾದಿಗಳ ಕುರಿತ ಅವನ ಬಹಳ ಹಳೆಯ ಮಾತುಗಳವು. ಅದಕ್ಕೆ ಆವಾಗಲೇ ಪ್ರತಿಕ್ರಿಯಿಸಿ ಮನಸ್ತಾಪವಾಗಿತ್ತು. ಈಗ ಮತ್ತೆ ಅದನ್ನೇ ಹೇಳುವುದು, ಈ ವಯಸ್ಸಲ್ಲಿ ಎಂದು ಸುಮ್ಮನೆ ಕೇಳಿಕೊಂಡು ಬಂದಿದ್ದ. ಈಗ ಅದೇ ಹೇಳುವುದು ಎಂದೊ, ಮಳ್ಳ ತಿರುಗಾಟ ಮಾಡಿಕೊಂಡು ಬಂದ ಆಲಸ್ಯದಿಂದಲೊ ಏನೂ ಶಂಭು ಹೋಗಲಿಲ್ಲ. ಎರಡು ದಿನ ಬಿಟ್ಟು ಹೋದರಾಯ್ತು ಎಂದಿದ್ದರೂ ಹೋಗಿರಲಿಲ್ಲ...

ಹೋಗಿ ನೋಡಿದರೆ ಅಣ್ಣನದೇ ಫೋನು. 'ಎಲ್ಲ ಮುಗಿದ ಹಾಗೆ ಕಾಣ್ತು, ಹೊರಟು ಬಾ' ಎಂದ. ಗೆಳೆಯನಿಗೆ ಫೋನ್ ಮಾಡಿದ. ಹೆಂಡತಿಗೆ ತಯಾರಾಗಲು ಹೇಳಿದ.

ಕಾರು ಹತ್ತಿ ಹೊರಟರು. ತಿರುವುಗಳ ರಸ್ತೆಯಲ್ಲಿ ಕತ್ತಲೆಯನ್ನು ಕೊರೆಯುತ್ತ ಕಾರು ಸಾಗುತ್ತಿತ್ತು.

ಮನೆಗೆ ಹೋಗಿ ಮುಟ್ಟಿದಾಗ ಬೆಳಗಾಗಲು ಇನ್ನೂ ಸುಮಾರು ಹೊತ್ತಿತ್ತು. ಘೋರ ದುಃಖವೂ ಅಲ್ಲದ, ಖುಷಿಯೂ ಅಲ್ಲದ ಮಂದವಾದ ಬೆಳಕು. ಹೊಳ್ಳಿಯ ಮೇಲೆ ಹೆಗಡೆಯವರನ್ನು ಮಲಗಿಸಿದ್ದರು. ತೆರೆದ ಬಾಯಿ ತೆರದ ಹಾಗೆ ಇತ್ತು. ಹತ್ತಿರದ ಊರಲ್ಲಿರುವ ಅಕ್ಕ ಅದಾಗಲೇ ಬಂದಿದ್ದಳು. ಅಣ್ಣ ಉದ್ವೇಗದಲ್ಲಿ ಇದ್ದಂತಿದ್ದ. ದೂರದಲ್ಲಿ ಇದ್ದ ತಂಗಿ ಬರಲು ತಡವಿತ್ತು. ಸ್ವಲ್ಪ ಹೊತ್ತಿನ ನಂತರ ಕಮಲಮ್ಮ ಶಂಭುವಿನ ಹತ್ತಿರ ಹೇಳತೊಡಗಿದಳು: '...ರಾತ್ರಿ ಹನ್ನೆರಡು ಗಂಟೆ ಸುಮಾರಿಗೆ ಎದ್ದು, ಬೀಡಿ ಹಚ್ಚಿಕೊಡು ಎಂದರು. ಹಚ್ಚಿ ಕೊಟ್ಟೆ. ಕಡೆಗೆ ನೀರು ಬೇಕು ಎಂದರು. ಅವರ ಹತ್ತಿರ ಕುಳಿತು ಕುಡಿಯಲಾಗುತ್ತಿರಲಿಲ್ಲ. ಏಳಿಸಿ ಕುಡಿಸಿದೆ. ಒಂದು ತಟ್ಟೆ ಕುಡಿದರು. ಮತ್ತೆ ಬೇಕು ಎಂದರು. ಎರಡನೇ ತಟ್ಟೆ ಕುಡಿಸುವಾಗ ಗಕ್ ಎಂದು ಉಸಿರು ನಿಂತಿತು. ನನ್ನ ಕಾಲ ಮೇಲೇ ಪ್ರಾಣ ಬಿಟ್ಟರು...' ಎಂದು ವಿಚಿತ್ರ ಸಮಾಧಾನದಲ್ಲಿ ಹೇಳುತ್ತಾ,

'ನಿನ್ನೆಯಿಡೀ, ನೀನು ಬಂದೇ ಬತ್ತೆ ಎಂದು ಭಾವನ ಹತ್ರ ಹೇಳ್ತಿದ್ದರು... ಅವರಿಗೆ ಕಡೆ ಗಳಿಗೆಲಿ ನಿನ್ನ ನೋಡಬೇಕು ಹೇಳಿತ್ತು ಕಾಣ್ತು...' ಎಂದಳು.

ಎದುರಿಗಿರುವ ತೋಟ, ಗುಡ್ಡ ಎಲ್ಲವೂ ಕತ್ತಲಲ್ಲಿ ನಿಂತುಕೊಂಡಿದ್ದವು. ಅಂಗಳದಲ್ಲಿ ಹಾಕಿದ ಬಲ್ಬಿನ ಬೆಳಕಿಂದ ತಳಿಯ ನೆರಳು ಡೊಂಕಾಗಿ ಒಳಗೆ ಹೊಳ್ಳಿಯ ಮೇಲೆ ಬಿದ್ದಿತ್ತು.

ಶಂಭು ಆ ನೆರಳನ್ನು ನೋಡುತ್ತ ಕುಳಿತ.

## ರಾಜು ಹೆಗಡೆ

ಶಿರಸಿಯ ಎಂ.ಎಂ. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಮಾಗೋಡು ಲೇಖಕರ ಸ್ವಂತ ಊರು.

ಕವನ ಸಂಕಲನಗಳು: 'ಪಾಯಸದ ಗಿಡ', 'ಅಂಗಳದಲ್ಲಿ ಆಕಾಶ', 'ಟೊಂಗೆಯಲ್ಲಿ ಸಿಕ್ಕ ನಕ್ಷತ್ರ'. ಕಥಾ ಸಂಕಲನ: 'ಅಪ್ಪಚ್ಚಿ'. ಲಘು ಬರಹಗಳ ಸಂಗ್ರಹ: 'ಹಳವಂಡ'. 'ಗಿರೀಶ ಕಾರ್ನಾಡರ ಸಮಗ್ರ ನಾಟಗಳ ಸಮೀಕ್ಷೆ' ರಾಜು ಅವರ ವಿಮರ್ಶಾ ಪುಸ್ತಕ. 2016ರ 'ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆ'ಯಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ.